ಅಧ್ಯಕ್ಷರು :– ನಾನು ಮಾನ್ಯ ಬಿ. ಜೆ. ಪಿ. ಸ್ನೇಹಿತರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಳ್ಳಬೇಕು. ಪ್ರಶ್ನೋತ್ತರ ವೇಳೆಯಾದ ಕೂಡಲೇ ನಾನು ತಮಗೆ ಅವಕಾಶವನ್ನು ಕೊಡುತ್ತೇನೆ. ಇದನ್ನು ಮುಕ್ತ ಮನಸ್ಸಿನಿಂದ ಮತ್ತೆ ಚರ್ಚೆ ಮಾಡೋಣ. ಇದರಿಂದ ಯಾವ ತೊಂದರೆಯೂ ಇಲ್ಲ. ಸಂಸದೀಯ ಭವ್ಯ ಪರಂಪರೆಗೆ ಭಂಗ ಮಾಡುವುದು ಬೇಡ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನೂ ಮನವಿ ಮಾಡಿಕೊಳ್ಳುತ್ತೇನೆ. ಈ ಪ್ರಶ್ನೋತ್ತರ ವೇಳೆ ಮುಗಿದ ತಕ್ಷಣ ಇದನ್ನು ತೆಗೆದುಕೊಳ್ಳಬೇಕು.

(ಈ ಹಂತದಲ್ಲಿ ಧರಣಿ ಕೂತಿದ್ದ ಮಾನ್ಯ ಬಿ. ಜೆ. ಪಿ. ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತರು.)

ಶ್ರೀ ಬಿ. ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೆ, ಇದು ನಮ್ಮ ಸೌಭಾಗ್ಯ. ಈ ರೀತಿ ಎಲ್ಲರಿಗೂ ಅವಕಾಶವನ್ನು ಕೊಟ್ಟು ಆ ಸ್ಥಾನದಲ್ಲಿ ತಾವು ಕುಳಿತುಕೊಂಡು ಅನೇಕ ದಿವಸಗಳಿಂದ ನಮಗೆ ಸಹಕಾರವನ್ನು ಕೊಡುತ್ತಾ ಬರುತ್ತಿದ್ದೀರಿ. ಅದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನರ್ಪಿಸುತ್ತಿದ್ದೇನೆ. ತಮ್ಮ ಮಾತನ್ನು ಮೀರಿ ನಡೆಯುವುದಕ್ಕೆ ನಾನು ಸಿದ್ಧವಿಲ್ಲ. ಕಾರಣ, ಇಲ್ಲಿ ನಾವು ಕೇವಲ 4 ಜನ ಮಾತ್ರ ಸದಸ್ಯರಿದ್ದೇವೆ. ಕೆಲವು ಸಾರಿ ರೈತರ ಕಣ್ಣೀರಿನ ಕರ್ಮಕಥೆಯನ್ನು ಹೇಳುವಾಗ ಅನಿವಾರ್ಯವಾಗಿ ನಾವು ಈ ರೀತಿಯ ಕೆಲಸವನ್ನು ಮಾಡ ಬೇಕಾಗುತ್ತದೆ...

(ಮುಂದಕ್ಕೆ)

ಶ್ರೀ ಬಿ. ಎಸ್. ಯಡಿಯೂರಪ್ಪ :– ಈ ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಆದುದರಿಂದಲೇ ನಾನು ಮಧ್ಯದಲ್ಲಿ ಯಾವುದೇ ಮಾತನಾಡುತ್ತಿಲ್ಲ. ನೀವು ಕಾರ್ಯಕಲಾಪಗಳನ್ನು ಮುಂದುವರಿಸಿದಮೇಲೆ ನಿನ್ನೆಯೇ ತಾವು ನಮ್ಮನ್ನು ಕರೆಯಿಸಿ ಮಾತನಾಡಬಹುದು, ಮಾನ್ಯ ಮುಖ್ಯಮಂತ್ರಿಗಳೂ ಇದ್ದಾರೆ, ಸಭಾನಾಯಕರೂ ಇದ್ದಾರೆ, ಈಗ ನಮ್ಮನ್ನು ಕರೆಯಿಸುತ್ತಾರೆಂದು ನಾವು ನಿರೀಕ್ಷಣೆಯನ್ನು ಮಾಡಿದ್ದೆವು. ಆದರೆ ನಾವು ಕೇವಲ 4 ಜನ ಮಾತ್ರ ಸದಸ್ಯರಿರುವುದರಿಂದ ಬಹುಶಃ ಇವರನ್ನು ನಿರ್ಲಕ್ಷ್ಯ ಮಾಡಬೇಕೆಂದು ಸರ್ಕಾರದವರು ಯೋಚನೆ ಮಾಡಿರಬೇಕು. ಆದರೆ ರಾಜ್ಯದ ರೈತ ಮುಂದೆ ಇದನ್ನು ತೀರ್ಮಾನ ಮಾಡುತ್ತಾನೆ. ನಾವು ನಿಶ್ಶಬ್ದವಾಗಿ ಕುಳಿತುಕೊಳ್ಳುತ್ತೇವೆ. ರೈತರ ಪರವಾಗಿ ನಾವು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನಿಮ್ಮ ಮನಸ್ಸಿಗೆ ನೋವನ್ನುಂಟು ಮಾಡಬೇಕೆಂಬ ಉದ್ದೇಶ ನಮಗಿಲ್ಲ. ದಯವಿಟ್ಟು ಇದರ ಬಗ್ಗೆ ಒಂದು ಅವಕಾಶವನ್ನು ಮಾಡಿಕೊಡಿ.

Sri. Quamarul Islam :– Mr. Speaker Sir, through you, I want a clarification. BJP. not for dharana. They said it is a party direction. I want to know whether the direction of the party has been changed.

ನಿನ್ನೆಯ ದಿವಸ ಅವರು ಈ ರೀತಿ ಹೇಳಿದ್ದರೆ ? ಹಾಗಾದರೆ ಡೈರೆಕ್ಷನ್ ಈಗ ಛೇಂಜ್ ಆಯಿತೆ ?

ಶ್ರೀಮತಿ ಚಂದ್ರಪ್ರಭ ಅರಸ್ :– ಮಾನ್ಯ ಅಧ್ಯಕ್ಷರೆ, ಸದನದ ಅಮೂಲ್ಯ ವೇಳೆಯನ್ನು ಈ ರೀತಿ ಹಾಳು ಮಾಡಿ ಪ್ರತಿಯೊಬ್ಬರಿಗೂ ಇವರು ತೊಂದರೆಯನ್ನು ಕೊಡುತ್ತಿದ್ದಾರೆ. ಆದ್ದರಿಂದ ಅವರ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ತಾವು ಆದೇಶವನ್ನು ಕೊಡಿ. ಇಲ್ಲದಿದ್ದರೆ ಸಭೆಯನ್ನು ನಡೆಸುವುದಕ್ಕೆ ಅವರು ಅನುವು ಮಾಡಿಕೊಟ್ಟು ಬೇರೆ ರೀತಿಯಲ್ಲಿ ಅವರು ಮಾಡಿಕೊಳ್ಳಲಿ. ಪ್ರತಿದಿವಸವೂ ಇದೇ ರೀತಿ ಮಾಡುತ್ತಿದ್ದಾರೆ. ಪ್ರಶ್ನೋತ್ತರ ವೇಳೆಯೂ ಆಗುವುದಿಲ್ಲ. ಮುಖ್ಯವಾಗಿ ವಿಷಯಗಳೂ ಚರ್ಚೆಯಾಗುವುದಿಲ್ಲ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ :– ಗುಬ್ಬಿ ತಾಲ್ಲೂಕಿನಲ್ಲಿರುವ ರೇಷ್ಮೆ ಸಾಕಾಣಿಕೆ ಕೇಂದ್ರಗಳು–

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 210 (865)

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನಲ್ಲಿ ಇರುವ ಒಟ್ಟು ಚಾಕಿ ಸಾಕಾಣಿಕಾ ಕೇಂದ್ರಗಳೆಷ್ಟು ?

ಆ) ಪೆರೂರ ಸರಕಾರಿ ರೇಷ್ಮೆ ಫಾರಂ ಎಷ್ಟು ಎಕರೆ ಪ್ರದೇಶದಲ್ಲಿದೆ ಹಾಗೂ ಎಷ್ಟು ಎಕರೆ ಪ್ರಮೇಶದಲ್ಲಿ ರೇಷ್ಮೆ ಬೆಳೆಯಲಾಗಿದೆ, ಒಂದು ವರ್ಷಕ್ಕೆ ಇದರ ಆದಾಯ ಮತ್ತು ಖರ್ಚು ಎಷ್ಟು ?

ಇ) ಫಾರಂನಲ್ಲಿರುವ ಸಿಬ್ಬಂದಿ ವರ್ಗದ ಪೂರ್ಣ ವಿವರ ನೀಡುವುದು ಹಾಗೂ ಅವರ ಸಂಬಳದ ಬಗ್ಗೆ ಪೂರ್ಣ ವಿವರ ನೀಡುವುದು. ?

ಈ) ಹರಿಜನ, ಗಿರಿಜನ ಹಾಗೂ ಸಣ್ಣ ಮತ್ತು ಅತಿ ಸಣ್ಣ ರೈತರುಗಳಿಗೆ ರೇಷ್ಮೆ ಬೆಳೆಯಲು ಸರ್ಕಾರದಿಂದ ಯಾವ ಪ್ರೋತ್ಸಾಹ ನೀಡಲಾಗುತ್ತಿದೆ.

ಉ) ಪ್ರೋತ್ಸಾಹ ನೀಡಲು ಯಾವ ಯಾವ ಯೋಜಗಳು ಜಾರಿಯಲ್ಲಿವೆ ಅದರಲ್ಲಿ ಗುಬ್ಬಿ ಕ್ಷೇತ್ರಕ್ಕೆ ಯಾವ ಮಾವ ಯೋಜನೆಗಳನ್ನು ಅಳವಡಿಸಲಾಗಿದೆ.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) :–

ಅ) ಒಂದು ಚಾಕಿ ಸಾಕಣೆ ಕೇಂದ್ರ ಆರು ರೇಂಜುಗಳು.

ಆ) ಹೆರೂರು ರೇಷ್ಮೆ ಫಾರಂನ ಒಟ್ಟು ವಿಸ್ತೀರ್ಣ 20 ಎಕರೆ.

ಒಪ್ಪನೇರಳ ವ್ಯವಸಾಯ :

ನೀರಾವರಿ	5.32 ಎಕರೆ
ಮಳೆ ಆಶ್ರಿತ	2.00 ಎಕರೆ
	7.32 ಎಕರೆ

ವರ್ಷದಲ್ಲಿ ಈ ಫಾರಂಗೆ ಖರ್ಚಾಗುತ್ತಿರುವ ಹಣ ರೂ. 1,81,500. ಇದು ಮೂಲ ಬಿತ್ತನೆ ಗೂಡನ್ನು ಉತ್ಪನ್ನ ಮಾಡುವ ಕ್ಷೇತ್ರವಾಗಿದ್ದು ವರ್ಷದಲ್ಲಿ ಸುಮಾರು 4.00ಲಕ್ಷ ಮೂಲ ಬಿತ್ತನೆ ಬೈಪೋಲ್ವಟೈನ್ ಗೂಡುಗಳನ್ನು ಉತ್ಪಾದಿಸಲಾಗುತ್ತತ್ತಿದೆ.

ಇ) ರೇಷ್ಮೆ ಕೃಷಿ ಪ್ರದರ್ಶಕರು	01
ಕೆಲಸಗಾರರು	20
ಖರ್ಚಿನ ವಿವರ	
ರೇಷ್ಮೆ ಪ್ರದರ್ಶಕರು	20,000–00 ರೂ.
ದಿನಗೂಲಿ ಕೆಲಸಗಾರರು	1.15,800–00 ರೂ.

ಹರಿಜನ, ಗಿರಿಜನ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೇಷ್ಮೆ ಬೆಳೆಯಲು ಕೆಳಕಂಡ ಪ್ರೋತ್ಸಾಹ ಕೊಡಲಾಗುತ್ತಿದೆ.

1) ಸಮುದಾಯ ಅಭಿವೃದ್ಧಿ ಕೇಂದ್ರಗಳ ಮೂಲಕ ಚಾಕಿ ಸಾಕಾಣಿಕೆ ಮತ್ತು ಪ್ರೌಢ ಹಂತ ರೇಷ್ಮೆ ಹುಳು ಸಾಕಾಣಿಕೆಯನ್ನು ಮಾಡಲು.

2) ಹೊಸದಾಗಿ ರೇಷ್ಮೆ ಬೆಳೆಯಲು ಪ್ರೋತ್ಸಾಹ ಧನ.

3) ರೇಷ್ಮೆ ಹುಳು ಸಾಕಾಣಿಕಾ ಮನೆ ನಿರ್ಮಾಣಕ್ಕೆ ಸಹಾಯ ಧನ.

4) ರೇಷ್ಮೆ ಹುಳು ಸಾಕಾಣಿಕೆಗೆ ಪುಕ್ಕಟೆಯಾಗಿ ಸಲಕರಣೆಗಳನ್ನು ಸರಬರಾಜು.

5) ತರಬೇತಿ ಕಾರ್ಯಕ್ರಮ.

ಗಿರಿಜನ ರೈತರು ರೇಷ್ಮೆ ಬೆಳೆಯಲು ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಗಿರಿಜನ ವಿಸ್ತರಣಾ ಕೇಂದ್ರಗಳ ಮೂಲಕ ಅವಶ್ಯಕವಾದ ತಾಂತ್ರಿಕ ಜ್ಞಾನ ಹಾಗೂ ವಿಸ್ತರಣಾ ಚಟುವಟಿಕೆಗಳು.

2) ಗಿರಿಜನ ಕಾಲೋನಿಗಳಲ್ಲಿ ಇಲಾಖಾ ತಾಂತ್ರಿಕ ಸಿಬ್ಬಂದಿ ಮೇಲ್ವಿಚಾರಣೆಯಲ್ಲಿ ಹುಳು ಸಾಕಾಣಿಕೆ

3) ರೇಷ್ಮೆ ಹುಳು ಸಾಕಾಣಿಕೆಗೆ ಅವಶ್ಯಕವಾದ ಸಲಕರಣೆಗಳನ್ನು ಪುಕ್ಕಟೆಯಾಗಿ ಸರಬರಾಜು.

4) ಹೊಸದಾಗಿ ಒಪ್ಪನೇರಳೆ ವ್ಯವಸಾಯ ಕೈಗೊಳ್ಳಲು ಪ್ರೋತ್ಸಾಹ ಧನ.

5) ಸಮಗ್ರ ಗ್ರಾಮೀಣ ಅಬಿವೃದ್ಧಿ ಯೋಜನೆ ಅಡಿಯಲ್ಲಿ :

1) ಒಪ್ಪನೇರಳೆ ನರ್ಸರಿ ಬೆಳೆಸುವುದು.

2) ತರಬೇತಿ ಕೊಡುವುದು.

3) ನೂಲು ಬಿಚ್ಚುವ ಘಟಕ ಸ್ಥಾಪನೆಗೆ ಸಹಾಯ ಮಾಡುವುದು.

ಊ) ಯೋಜನೆಗಳನ್ನು ಮೇಲೆ ತಿಳಿಸಿದಂತಿದೆ. ಈ ಯೋಜನೆಗಳಲ್ಲಿ ಗುಬ್ಬಿ ಕ್ಷೇತ್ರದಲ್ಲಿ ಅಳವಡಿಸಿ ಕೊಂಡಿರುವುದು ಕೆಳಕಂಡಂತಿದೆ.

1) ಹೊಸದಾಗಿ ರೇಷ್ಮೆ ವ್ಯವಸಾಯ ಕೈಗೊಳ್ಳಲು ಪ್ರೋತ್ಸಾಹ ಧನ.
2) ರೇಷ್ಮೆ ಹುಳು ಸಾಕಾಣಿಕೆ ಮನೆ ಕಟ್ಟಲು ಸಹಾಯಧನ.
3) ಪ್ರೋಗ್ರಾಂ ಆಫ್ ಪ್ಯಾಕೇಜ್ ಬೆನಿಫಿಟ್ಸ್.

ಶ್ರೀ ಜಿ. ಎಸ್. ಶಿವನಂಜಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು :– ಅಭಿನಂದಿಸಿದ ಮೇಲೆ ಉಪ ಪ್ರಶ್ನೆ ಇನ್ನೆಲ್ಲಿ ಬರುತ್ತದೆ ?

ಶ್ರೀ ಜಿ. ಎಸ್. ಶಿವನಂಜಪ್ಪ :– ಇನ್ನೂ ಸ್ವಲ್ಪ ಇದೆ. ನನ್ನ "ಆ" ಪ್ರಶ್ನೆಯಲ್ಲಿ ಹೆರೂರು ರೇಷ್ಮೆ ಫಾರಂನ ವರ್ಷದ ಆದಾಯ ಮತ್ತು ಖರ್ಚು ಎಷ್ಟು ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಕೇವಲ ಖರ್ಚನ್ನು ಮಾತ್ರ ಹೇಳಿದ್ದಾರೆ. ಆದಾಯವನ್ನು ಹೇಳಿಲ್ಲ. ಆ ಆದಾಯ ಎಷ್ಟು ಎಂಬುದನ್ನು ಹೇಳಬೇಕು. ಮತ್ತು ಅಲ್ಲಿ ಸುಮಾರು 20 ಎಕರೆ ಜಮೀನು ಇದ್ದು ಆದರಲ್ಲಿ ಕೇವಲ 7.32 ಎಕರೆ ಮಾತ್ರ ಉಪಯೋಗ ಮಾಡುತ್ತಿದ್ದಾರೆ. ಇನ್ನುಳಿದ ಜಮೀನಿನಲ್ಲಿ ಏತಕ್ಕೆ ರೇಷ್ಮೆ ಬೆಳೆಯನ್ನು ಬೆಳೆಯಬಾರದು ಎಂಬುದು ಇನ್ನೊಂದು ಪ್ರಶ್ನೆ

ಇನ್ನು ಎರಡನೆಯದಾಗಿ, (ಈ) ಮತ್ತು (ಉ) ಪ್ರಶ್ನೆಗಳಿಗೆ ಉತ್ತರವಾಗಿ ಗುಬ್ಬಿ ತಾಲೂಕಿನಲ್ಲಿ ಈ ಯೋಜನೆಗಳನ್ನು ಅಳವಡಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಅಲ್ಲಿ ಈ ಯೋಜನೆಗಳನ್ನು ಅಳವಡಿಸಿಲ್ಲ. ಆದ್ದರಿಂದ ಇದನ್ನು ಅಳವಡಿಸಲು ಕೂಡಲೇ ಕ್ರಮ ತೆಗೆದುಕೊಂಡು ಆದೇಶ ನೀಡುತ್ತೀರಾ ?

ಶ್ರೀ ವಿ. ಮುನಿಯಪ್ಪ :– ಮಾನ್ಯ ಅಧ್ಯಕ್ಷರೆ, ಹೆರೂರು ಸರ್ಕಾರೀ ರೇಷ್ಮೆ ಫಾರಂನಲ್ಲಿ ಸುಮಾರು 20 ಎಕರೆ ಜಮೀನಿದ್ದು ಆದರಲ್ಲಿ 7.32 ಎಕರೆಯನ್ನು ಮಾತ್ರ ನೀರಾವರಿಗೆ ನಾವು ಅಳವಡಿಸಿಕೊಂಡಿದ್ದೇವೆ- ಇನ್ನುಳಿದ ಜಮೀನನ್ನು ಹಾಗೆಯೇ ಬಿಟ್ಟುಕೊಂಡಿದ್ದೇವೆ. ಏಕೆಂದರೆ, ನೀರಾವರಿ ಸೌಲಭ್ಯ ಸಾಕಾಗದೇ ಇರುವುದ-ರಿಂದ. ಈ ಫಾರಂನಲ್ಲಿ ಮೂಲ ತಳಿ ಬಿತ್ತನೆ ಗೂಡುಗಳನ್ನು ಬೆಳೆಯುತ್ತಿದ್ದೇವೆ. ಮೂಲ ತಳಿಗಳನ್ನು ಬೆಳೆಯು ತ್ತಿರುವ ಉದ್ದೇಶ ಎಂದರೆ, ನಮ್ಮದೇ ಆದಂಥ ರೇಷ್ಮೆ ಕೊಠಿಗಳಿಗೆ ಇಲ್ಲಿ ಬೆಳಿಸಿದಂಥ ಮೂಲ ತಳಿಯನ್ನು ಒದಗಿಸಬೇಕೆಂಬುದು . ಆದ್ದರಿಂದ ಇಲ್ಲಿ ಬೆಳೆಯತಕ್ಕ ಮೂಲ ತಳಿಗೆ ಬೆಲೆಯನ್ನು ನಿಗದಿ ಮಾಡುವುದಿಲ್ಲ. ನಮ್ಮ ಉತ್ಪಾದನಾ ಖರ್ಚನ್ನು ಮಾತ್ರ ಅಂದಾಜಿನಲ್ಲಿಟ್ಟುಕೊಂಡು ನಾವು ಈ ಕೆಲಸವನ್ನು ಮಾಡುತ್ತಿದ್ದೇವೆಯೇ ಹೊರತು ಬೇರೆ ಅಲ್ಲ. ಇದಕ್ಕೆ ನಾವು ಬೆಲೆಯನ್ನು ನಿಗದಿ ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಮೂಲ ಉದ್ದೇಶ ಉತ್ತಮ ಬಿತ್ತನೆಯ ತಳಿಯನ್ನು ಕೊಡಬೇಕೆಂಬುದು.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ.....

(ಗೊಂದಲ)

ಶ್ರೀ ಎಂ. ವಿ. ವೆಂಕಟಪ್ಪ :– ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಸ್ವಲ್ಪ ನಿಲ್ಲಿಸಿ ಎಂದು ಹೇಳುವುದಾದರೆ ಇದರಲ್ಲಿ ಏನಾದರೂ ಅರ್ಥ ಇದೆಯೇ ? ನನಗಂತೂ ಇದು ಅರ್ಥ ವಾಗುತ್ತಿಲ್ಲ.

ಶ್ರೀ ವಿ, ಮುನಿಯಪ್ಪ ;– ಉತ್ತಮವಾದಂಥ ಗೂಡಿನ ಗುಣಮಟ್ಟವನ್ನು ಕಾಪಾಡುವುದಕ್ಕೋಸ್ಕರ ಬೆಲೆಯನ್ನು ನಿಗದಿ ಮಾಡದೆ ನಮ್ಮ ಸರ್ಕಾರಿ ಗ್ರೇನೇಜ್‌ಗಳಿಗೆ ಕೊಡಬೇಕೆನ್ನುವ ದೃಷ್ಟಿಯನ್ನು ಇಟ್ಟುಕೊಂಡು ಫಾರಮ್‌ನ್ನು ಇಟ್ಟುಕೊಂಡಿದ್ದೇವೆ. ಇಂಥ ಫಾರಮ್‌ಗಳಲ್ಲಿ ಈಗಾಗಲೇ ಹಲವಾರು ಅಭಿವೃದ್ಧಿ ಯೋಜನೆಗಳ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಮ್ಮ ಸರ್ಕಾರದ ವತಿಯಿಂದ ಆ ಫಾರಮ್ ಡೆವಲಪಮೆಂಟ್ ಬಗ್ಗೆ ಆ ತಾಲ್ಲೂಕಿನಲ್ಲಿ ತಾಂತ್ರಿಕ ಸೇವಾ ಕೇಂದ್ರವನ್ನು ಓಪನ್ ಮಾಡಬೇಕೆಂದು ಹೇಳಿ ಜೊತೆಗೆ ತಾಂತ್ರಿಕ ಸೇವಾಕೇ ೇಂದ್ರದ ಮುಖಾಂತರ ಒಬ್ಬ ಸೀನಿಯರ್ ಸೆರಿಕಲ್ಚರ್ ಇನ್‌ಸ್ಪೆಕ್ಟರ್ ಎನ್ನುವ ಹೊಸದೊಂದು ಪೋಸ್ಟ್ ಕ್ರಿಯೇಟ್ ಕೂಡ ಮಾಡಿದ್ದೇವೆ. ರೇರಿಂಗ್ ಹೌಸ್ ಎಂದು ಕೊಡುತ್ತಿದ್ದೇವೆ. ಅದೇ ಫಾರಮ್‌ನಲ್ಲಿ ಉಳಿಕೆ ಇರತಕ್ಕಂಥ ಜಮೀನಿನಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಮಾಡುವಂಥ ಒಂದು ಕಾರ್ಯಕ್ರಮವನ್ನು ಸರ್ಕಾರ ದವತಿಯಿಂದ ಇಟ್ಟುಕೊಂಡಿದ್ದೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ :– ಮಾನ್ಯ ಅಧ್ಯಕ್ಷರೆ, ನನ್ನ 'ಇ' ಮತ್ತು 'ಉ' ಪ್ರಶ್ನೆಗೆ ಯೋಜನೆಗಳನು ಅಳವಡಿಸಲಾಗಿದೆಯೇ ಗುಬ್ಬಿ ತಾಲ್ಲೂಕಿಗೆ ಎಂದು ಕೇಳುತ್ತೇನೆ. ಇದುವರೆವಿಗೂ ಯಾವ ಕಾರ್ಯಕ್ರಮವೂ

ಅದರ ಪ್ರಕಾರವಾಗಿ ಆಗಿಲ್ಲ. ದಯವಿಟ್ಟು ಕೂಡಲೇ ತೀವ್ರ ಕ್ರಮ ತೆಗೆದುಕೊಂಡು ಈ ಯೋಜನೆಗಳನ್ನು ಗುಬ್ಬಿ ತಾಲ್ಲೂಕಿಗೆ ಅಳವಡಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿ. ಮುನಿಯಪ್ಪ :– ಮಾನ್ಯ ಅಧ್ಯಕ್ಷರೆ, ಈ ಸಾರಿ ಸ್ಪೇಷಲ್ ಕಾಂಪೊನೆಂಟ್ ಪ್ರೋಗ್ರಾಂ ಮುಖಾಂತರ ಹೊಸದಾಗಿ ನ್ಯೂಪ್ಲಾಂಟೇಷನ್ ಮಾಡತಕ್ಕಂಥ ವ್ಯವಸ್ಥೆಯನ್ನು ಕೈಗೊಂಡು 15 ಜನರನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಧನವನ್ನಾಗಿ 15 ಸಾವಿರ ರೂಪಾಯಿಗಳನ್ನು ಕೊಡಲು ವ್ಯವಸ್ಥೆಯನ್ನು ಮಾಡಲಾಗಿದೆ. ಜೊತೆಗೆ ಸಿಲ್ಕ್ ರೇರಿಂಗ್ ಹೌಸ್ ಮಾಡುವುದಕ್ಕೆ ಒಬ್ಬರನ್ನು ಆಯ್ಕೆ ಮಾಡಿದ್ದೇವೆ. ಜೊತೆಗೆ ಪ್ಯಾಕೇಜ್ ಪ್ರೋಗ್ರಾಮ್ ಎಂದು ಹೇಳಿ ಅವರಿಗೆ ಅದಕ್ಕೆ ಬೇಕಾದಂಥ ಸಾಮಾನು ಸಲಕರಣೆಗಳನ್ನು ಕೊಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು 12 ಜನರನ್ನು ಗುರುತಿಸಿದ್ದೇವೆ. ವಿಶೇಷ ಘಟಕ ಯೋಜನೆಯ ಮುಖಾಂತರ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂಥ ಒಂದು ಕಾರ್ಯಕ್ರಮವನ್ನು ಮುಂದೆ ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇವೆ.

ವಿಷಯ :– ಎರಡನೆಯ ಮಹಾಯುದ್ಧದಲ್ಲಿ ಸೇವೆ ಸಲ್ಲಿಸಿದಂತಹವರಿಗೆ ನಿವೃತ್ತಿ ವೇತನ.

ಚುಕೆ ಗುರುತಿನ ಪ್ರಶ್ನೆ ಸಂಖ್ಯೆ 211 (981)

ಶ್ರೀ ಕೆ. ಸಿ. ಮೋಡಗೆಕರ್ ದೇಸಾಯಿ (ಬಾಗೇಪಾಡಿ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಪಂಚದ ಎರಡನೆಯ ಮಹಾ ಯುದ್ಧದಲ್ಲಿ (1943 ರಿಂದ 1946) ಭಾಗವಹಿಸಿದ ಮಾಜಿ ಸೈನಿಕರಿಗೆ ಸರ್ಕಾರದಿಂದ ಪಿಂಚಣಿ ಕೊಡುವ ಯೋಜನೆ ಇದೆಯೇ ?

ಆ) ಹಾಗೇನಾದರೂ ಈ ಯೋಜನೆ ಇದ್ದಲ್ಲಿ ಇದುವರೆವಿಗೂ ಸರ್ಕಾರಕ್ಕೆ ನಿವೃತ್ತ ಸೈನಿಕರಿಂದ ಬಂದಿರೆತಕ್ಕಂತಹ ಒಟ್ಟು ಅರ್ಜಿಗಳೆಷ್ಟು ?

ಇ) ಮತ್ತು ಪ್ರಪಂಚದ ಎರಡನೇ ಮಹಾ ಯುದ್ಧದಲ್ಲಿ ಭಾಗವಹಿಸಿದ ಮಾಜಿ ಸೈನಿಕರಿಗೆ ಪಿಂಚಣಿ ಕೊಡುವ ಯೋಜನೆಯನ್ನು ಸರ್ಕಾರವು ಕಾರ್ಯಗತ ಗೊಳಿಸುತ್ತಿದೆ ಎಂದು ಬೇರೆ ಬೇರೆ ಇಲಾಖೆಗಳು ಸಳೀಯ ದಿನ ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟಿರುವುದೇ ?

ಈ) ಹಾಗಿದ್ದಲ್ಲಿ, ಇದುವರೆವಿಗೂ ಒಟ್ಟು ಎಷ್ಟು ಮಂದಿಗೆ ಈ ಪಿಂಚಣಿ ಸೌಲಭ್ಯವನ್ನು ಮಂಜೂರಾತಿ ನೀಡಿದೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :–

ಅ) ಇಲ್ಲ.

ಆ) ಉದ್ಭವಿಸುವದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

Sri. K. C. Modgekar Desai:– Speaker Sir, I am surprised to get a reply for the question "Whether there is a scheme of the Karnataka Government to sanction pension to all those who have served in the Second World War (during 1943 to 1946) ?" Sir, it is a known fact and history that Ex-Servicemen of Azad Hind Sena led by Netaji Subhash Chandra Bose have helped the nation to get its independence with the support of Japan during 1943–46. These servicemen should get the pension like freedom fighters who have sacrificed their lives and served during their lives. We are eating the fruits of independent India. Many states like Maharashtra and other states have sanctioned this pension to those who served during 1943-46. Why the Karnataka Government is not considering giving pension to them ?

Sri. S. Bangarappa :– There is no scheme as such evolved by any state government including Karnataka. This is a scheme evolved by the Government of India. Actually the Government of India wrote to all the State Governments. In fact they published enews item which has appeared in news Papers like The Hindu, The Indian Express